ಮೈಸೂರ ಗೆಜೆಟ್.

ನಂ. 42.] ಸರ್ಕಾರದಿಂದ ಪ್ರಾಮುಖ್ಯ ಆದ್ದು. [ನಂ. 44.

ಬೆಂಗಳೂರು, ಗುರುವಾರ, ನವೆಂಬರ ತಾ॥ 7, ಸ್ 1907.

II ನೆ ಭಾಗ.

ಇಂಡೆಗವರ್ನ್‌ಮೆಂಟ್, ರೆಸಿಡೆಂಟರು, ಚೀಫ್ ಜಡ್ಜ್‌ರು ವಗೈರೆಯವರಿಂದ ಕೊಡೋಪಾದ ಇಸ್ತಿಹಾರ್‌ನಾಮೆಗಳು.

ಮೈಸೂರು ಡಿಸ್ಟ್ರಿಕ್ಟ್ ಎಕ್ಸೈಜ್ ಆಫೀಸು.

ಇಸ್ತಿಹಾರ್‌ನಾಮೆ

ಮೈಸೂರು, ತಾರೀಖು 2 ನೆ ಅಕ್ಟೋಬರ್ 1907.

ಈ ಕೆಳಗೆ ಕಾಣಿಸಿರುವ ಗ್ರಾಮಗಳ ಇನಾಂದಾರರುಗಳಿಗೆ ತಿಳಿಯಪಡಿಸುವದೇನಂದರೆ :—ಈ ಕೆಳಗೆ ಕಾಣಿಸಿರುವ ಇನಾಂ ಗ್ರಾಮಗಳ ಬಾಬತು ಮಾನ್ಯದಾರರಿಗೆ ಆಯಾ ಗ್ರಾಮದ ಶೇಂದಿ ಹುಟ್ಟುವಳಿ ಹಕ್ಕು ಇರುವ ವಿಚಾರದಲ್ಲಿ ಕೆಳಗೆ ನಮೂದಿಸಿರುವ ತಾರೀಖುಗಳಲ್ಲಿ ಅವಶ್ಯವಿರುವ ವಿಚಾರಣೆ ನಡಿಸಲ್ಪಡುತ್ತೆ. ಆಯಾ ಗ್ರಾಮಗಳಿಗೆ ಸಂಬಂಧಪಟ್ಟ ಇನಾಂದಾರರುಗಳು ಖುದ್ದಾಗಿ ಯಾಗಲೀ ಅಥವಾ ಅವರಿಂದ ವೊಕ್ಕ್ಯಾರುನಾಮೆ ಪಡದವರಾಗಲೀ ಅವಶ್ಯವಿರುವ ಸನ್ನದು ಆಯಾ ಗ್ರಾಮದ ಇನಾಂ ಸೆಟ್ಲ್‌ಮೆಂಟು ರಿಜಿಸ್ಟರು ಎಕ್ಸಟ್ರಾಕ್ಟು ಮುಂತಾದ ದಾಖಲೆಗಳ ಸಹಿ ಮೈಸೂರಲ್ಲಿ ನಮ್ಮ ಆಫೀಸು ಬಳಿ ನಿಯಾಮಕ ಮಾಡಲ್ಪಟ್ಟ ತಾರೀಖಿನ ಹಗಲು 11 ಘಂಟೆಗೆ ಸರಿಯಾಗಿ ಹಾಜರಾಗತಕ್ಕದ್ದು. ಹಾಗೆ ಹಾಜರಾಗದೆ ತಪ್ಪುದಲ್ಲಿ ರೂಲ್ಸು ಮೇರೆ ಕ್ರಮ ಜರಿಗಿಸಲ್ಪಡುತ್ತೆ. ನಂತರ ಬರುವ ಯಾವ ತಕರಾರನ್ನೂ ಅಂಗೀಕರಿಸಲು ಆಗಲಾರದಾಗಿ ತಿಳಿಯಪಡಿಸಿದೆ.

ತಾಲ್ಲೂಕು.	ಗ್ರಾಮ.	ಹೀರಿಂಗು ತಾರೀಖು.
ಮೈಸೂರು ...	ಮದ್ದೂರು ...	1907ನೆ ನವಂಬರು 26
ಡಿಟೋ ...	ಕಲ್ಲಹಳ್ಳಿ ...	ಡಿಟೋ 26
ನಂಜನಗೂಡು ...	ಹಟ್ನಾಳು ...	ಡಿಟೋ 27
ಡಿಟೋ ...	ಕಣಿಯನೂರು ...	ಡಿಟೋ 27
ಮೈಸೂರು ...	ಕಡಕೊಳ, ಸಿಂದುವಳ್ಳಿ ...	ಡಿಟೋ 27
ಡಿಟೋ ...	ದುದ್ದಗೆರ ...	ಡಿಟೋ 28
ಡಿಟೋ ...	ಗೋಪಾಲಪುರ ...	ಡಿಟೋ 28
ಡಿಟೋ ...	ಯಂಡೆಹಳ್ಳಿ	ಡಿಟೋ 29

ಎ. ಕೆ. ಸೈಯದ್ ತಾಜುಪೀರ್ಸಾ,
ಡಿಸ್ಟ್ರಿಕ್ಟ್ ಎಕ್ಸೈಜ್ ಆಫಿಸರ್, ಮೈಸೂರು.